# ನಿಮ್ಮೊಡನೆ

## ತ್ವರಿತ ಇತ್ಯರ್ಥ, ಸಮಾನ ಚಿಂತನೆ

**ತ್ವರಿತ ನ್ಯಾಯಾಲಯಗಳ ಸ್ಥಾಪನೆಗೆ ಉತ್ಸಾಹ ತೋರಿಸಿರುವ ರಾಜ್ಯ ಸರ್ಕಾರ ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಚಿಕಿತ್ಸೆ, ಪರಿಹಾರದಂತಹ ಮತ್ತಷ್ಟು ಉಪಕ್ರಮಗಳನ್ನು ಕೈಗೊಳ್ಳಬೇಕಿದೆ.**

ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ರಾಜ್ಯ ಸರ್ಕಾರವು ಹತ್ತು ವಿಶೇಷ (ತ್ವರಿತ) ನ್ಯಾಯಾಲಯ ಸ್ಥಾಪಿಸುವ ಪ್ರಕ್ರಿಯೆಗೆ ಚಾಲನೆ ನೀಡಿದೆ. ಈ ಸಂಬಂಧ ನ್ಯಾಯಾಧೀಶರ ನೇಮಕ ಮತ್ತಿತರ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವ ಸಲುವಾಗಿ ಪ್ರಸ್ತಾವನೆಯನ್ನು ಹೈಕೋರ್ಟ್‌ಗೆ ಕಳಿಸಿಕೊಡಲಾಗಿದೆ. ಹೈಕೋರ್ಟ್ ಸಲಹೆ ಒಂದು ತಾಂತ್ರಿಕ ವಿಧಿ ಅಷ್ಟೆ. ಇನ್ನೇನು ಕೆಲವೇ ದಿನಗಳಲ್ಲಿ ಈ ನ್ಯಾಯಾಲಯಗಳು ಜಿಲ್ಲಾ ಮಟ್ಟದಲ್ಲಿ ಕಾರ್ಯಾರಂಭ ಮಾಡಲಿವೆ ಎಂದು ಕಾನೂನು ಸಚಿವ ಟಿ.ಬಿ.ಜಯಚಂದ್ರ ಭರವಸೆ ನೀಡಿದ್ದಾರೆ.

ಹೆಚ್ಚು ಅತ್ಯಾಚಾರದ ಪ್ರಕರಣಗಳು ವರದಿಯಾದ ಜಿಲ್ಲೆಗಳಲ್ಲಿ ಸದ್ಯಕ್ಕೆ ಈ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು. ಬೆಂಗಳೂರು ನಗರದಲ್ಲಿ ಎರಡು ಹಾಗೂ ದಕ್ಷಿಣ ಕನ್ನಡ, ಬೆಳಗಾವಿ, ಗುಲ್ಬರ್ಗ, ಕೊಡಗು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಮೈಸೂರು, ರಾಮನಗರ ಜಿಲ್ಲೆಗಳಲ್ಲಿ ತಲಾ ಒಂದು ತ್ವರಿತ ನ್ಯಾಯಾಲಯಗಳು ಸ್ಥಾಪನೆಯಾಗಲಿವೆ. ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಈ ನ್ಯಾಯಾಲಯಗಳಿಗೆ ಒಬ್ಬ ಜಿಲ್ಲಾ ನ್ಯಾಯಾಧೀಶರು ಹಾಗೂ 37 ಸಿಬ್ಬಂದಿ ಇರುತ್ತಾರೆ. ಮೊಕದ್ದಮೆಗಳ ಇತ್ಯರ್ಥಕ್ಕೆ ಸಮಯ ನಿಗದಿ ಮಾಡಲಾಗುವುದು. ಮನೆ ಬಾಗಿಲಿಗೆ ನ್ಯಾಯ ಹಾಗೂ ತ್ವರಿತ ಇತ್ಯರ್ಥದ ದೃಷ್ಟಿಯಿಂದ ಇದೊಂದು ಸ್ವಾಗತಾರ್ಹ ಕ್ರಮ.

ಅತ್ಯಾಚಾರದ ಪ್ರಕರಣಗಳು ಬೇಗ ಇತ್ಯರ್ಥವಾಗಬೇಕು. ಆರೋಪಿಗಳಿಗೆ ಶಿಕ್ಷೆಯಾಗಬೇಕು. ಇದು ಜನಸಾಮಾನ್ಯರ ನಿರೀಕ್ಷೆ. ಒಡಿಶಾದ ಸಂಬಾಲಪುರದಲ್ಲಿ ಮಧು ಎಂಬ 7ವರ್ಷದ ಬಾಲಕಿ ಮೇಲೆ ಅತ್ಯಾಚಾರ ಮಾಡಿದ ಆರೋಪಿ ಪ್ರದೀಪ್ ದಲಾಯ್ ಎಂಬುವನಿಗೆ 28ದಿನಗಳಲ್ಲಿ ವಿಚಾರಣೆ ಮುಗಿಸಿ ಶಿಕ್ಷೆ ವಿಧಿಸಿದ ನ್ಯಾಯಾಧೀಶರ ಕ್ರಮಕ್ಕೆ ದೇಶದಾದ್ಯಂತ ಸ್ವಾಗತ ವ್ಯಕ್ತವಾಗಿತ್ತು. ಮುಂಬೈಯಲ್ಲಿ 17ವರ್ಷದ ತರುಣಿಯ ಮೇಲೆ ಪೊಲೀಸ್ ಪೇದೆಯೇ ಅತ್ಯಾಚಾರ ಮಾಡಿದಾಗ ಮೂರೇ ದಿನಗಳಲ್ಲಿ ಕೆಲಸದಿಂದ ವಜಾ ಮಾಡಿ, ತ್ವರಿತ ವಿಚಾರಣೆ ನಡೆಸಿ 12ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿತ್ತು. ಜರ್ಮನಿ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ ಯುವಕನಿಗೆ 21ದಿನಗಳಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಇವು ಕೆಲವು ಉದಾಹರಣೆಗಳಷ್ಟೆ. ಆದರೆ ಇಂತಹ ಸಂತತಿ ಹೆಚ್ಚಬೇಕು. ಯಾಕೆಂದರೆ ಶಿಕ್ಷೆಯ ಭೀತಿಯಿಂದ ದೌರ್ಜನ್ಯಗಳಿಗೆ ಕಡಿವಾಣ ಹಾಕಬಹುದು ಎಂಬುದು ಒಂದು ನಿರೀಕ್ಷೆ. ಇದು ಭಾಗಶಃ ನಿಜ ಕೂಡ.


ಆದರೆ ಪ್ರತಿವರ್ಷ ಒಂದು ಲಕ್ಷಕ್ಕೂ ಅಧಿಕ ಅತ್ಯಾಚಾರ ಮೊಕದ್ದಮೆ ದಾಖಲಾದರೂ, ಅವುಗಳಲ್ಲಿ 18ರಿಂದ 20ಸಾವಿರ ಮೊಕದ್ದಮೆಗಳು ಮಾತ್ರ ಇತ್ಯರ್ಥವಾಗುತ್ತವೆ. ಪರಿಹಾರ ಸಿಗುವುದು ಶೇ.1ರಷ್ಟು ಮಹಿಳೆಗೆ ಮಾತ್ರ ಎಂಬ ಅಂಕಿ ಅಂಶಗಳು ಗಾಬರಿ ಹುಟ್ಟಿಸುತ್ತವೆ.

ದೆಹಲಿಯಲ್ಲಿ ಯುವತಿ ಮೇಲೆ ನಡೆದ ಅತ್ಯಾಚಾರದ ಪ್ರಕರಣದ ನಂತರ ದೇಶದಾದ್ಯಂತ ಎದ್ದ ಪ್ರತಿಭಟನೆಗಳಿಂದ ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡಿತು. ಅತ್ಯಾಚಾರಿಗಳಿಗೆ ಅತ್ಯುಗ್ರ ಶಿಕ್ಷೆ ವಿಧಿಸಬಹುದಾದ ಅಪರಾಧ ಕಾನೂನು ತಿದ್ದುಪಡಿ ಕಾಯಿದೆ– 2013ಯನ್ನು ಇತ್ತೀಚೆಗೆ ಅಂಗೀಕರಿಸಿದೆ. ಈ ಮಧ್ಯೆ ನ್ಯಾಯಮೂರ್ತಿ ಜೆ.ಎಸ್.ವರ್ಮಾ ಸಮಿತಿ ಮಾಡಿದ ಶಿಫಾರಸುಗಳನ್ನು ತಿದ್ದುಪಡಿ ಕಾಯಿದೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಹೊಸ ಕಾಯಿದೆಯನ್ವಯ ಆರೋಪಿಗೆ ಗಲ್ಲು ಶಿಕ್ಷೆ ನೀಡಲೂ ಅವಕಾಶ ಇದೆ.

ತ್ವರಿತ ನ್ಯಾಯಾಲಯಗಳ ಸ್ಥಾಪನೆಗೆ ಉತ್ಸಾಹ ತೋರಿಸಿರುವ ರಾಜ್ಯ ಸರ್ಕಾರ ಮಹಿಳೆಯರ ರಕ್ಷಣೆಗೆ ಮತ್ತಷ್ಟು ಕ್ರಮ ಕೈಗೊಳ್ಳಬೇಕಿದೆ. ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಯಾವ ರೀತಿ ಚಿಕಿತ್ಸೆ ಅಗತ್ಯ ಎಂಬುದರ ಕುರಿತು ವೈದ್ಯರಿಗೆ ತರಬೇತಿ ನೀಡುವ ಯೋಜನೆಯೊಂದು ಜಾರಿಯಲ್ಲಿತ್ತು. ಅದನ್ನು ಕೈಬಿಡಲಾಗಿದೆ. ಆ ಯೋಜನೆಯನ್ನು ಪುನರಾರಂಭ ಮಾಡಿ ಅತ್ಯಾಚಾರಕ್ಕೆ ಒಳಗಾದವರಿಗೆ ತುರ್ತು ನೆರವು ನೀಡಿ, ಅವರ ಚಿಕಿತ್ಸೆಗೆಂದೇ ಪ್ರತ್ಯೇಕ ವೈದ್ಯರ ನೇಮಕ ಮಾಡಬೇಕು. ಇದೆಲ್ಲ ಶಿಕ್ಷೆ ಮತ್ತು ಪರಿಹಾರದ ಕ್ರಮಗಳು. ಜವಾಬ್ದಾರಿಯುತ ಸರ್ಕಾರವೊಂದರಿಂದ ಇಷ್ಟರಮಟ್ಟಿಗಿನ ಸ್ಪಂದನೆ ಅಪೇಕ್ಷಣೀಯ.

ಆದರೆ ಅತ್ಯಾಚಾರಕ್ಕೊಳಗಾದ ಮಹಿಳೆಯ ಶೀಲವನ್ನೇ ಶಂಕಿಸುವ ವಿಕೃತ ಮನಸ್ಸುಗಳು ಇರುವವರೆಗೂ ಶಿಕ್ಷೆಯೊಂದರಿಂದಲೇ ಪರಿಹಾರ ಸಾಧ್ಯವೆ? ಮಹಿಳೆ ಭೋಗದ ವಸ್ತು ಎಂಬ ಸಮಾಜದ ಕೆಲವರ ಮನೋಭಾವ ಬದಲಾಗಬೇಕು. ಕಾನೂನಿನ ಜತೆಜತೆಗೆ ಸಾಮಾಜಿಕ ಮೌಲ್ಯಗಳ ವಿವೇಚನೆಯೂ ಬಹಳ ಮುಖ್ಯ. ಸಮಾನ ನೆಲೆಯಲ್ಲಿ ಮಹಿಳೆಯನ್ನು ಗ್ರಹಿಸುವ ಪ್ರಗತಿಪರ ಚಿಂತನೆಗಳು ಎಲ್ಲರಲ್ಲೂ ರಕ್ತಗತವಾಗುವವರೆಗೆ ಮಹಿಳಾ ಶೋಷಣೆ ನಿಲ್ಲುವುದಿಲ್ಲ. ಆದ್ದರಿಂದ ಸಮಾಜಕ್ಕೇ ಚಿಕಿತ್ಸೆ ಆಗಬೇಕಾಗಿರುವುದು ಕಾನೂನಿನಷ್ಟೇ ಮುಖ್ಯ.

■ ಗುಡಿಹಳ್ಳಿ ನಾಗರಾಜ



ಈಶ್ವರ